ತಲುಪಿ ಬಿಟ್ಟಿದ್ದಳು.

ಆದರೆ ಹೊರಗಿನವರ ಕುರಿತಾದ ಈ ನಿರ್ಲಿಪ್ತ ಧೋರಣೆ ಸ್ವಂತ ಮಕ್ಕಳ ವಿಷಯಕ್ಕೆ ಬಂದಾಗ ವಿಚಲಿತವಾಗುತ್ತಿದೆ. ಕೈಕಾಲುಗೆಡಿಸುತ್ತಿದೆ. ಮುಳ್ಳಿನ ಮೇಲೆ ಕೂತವಳಂತೆ ಗಂಡನ ಪಕ್ಕ ಕೂತು ನಡೆಯಬೇಕಾದ ಶಾಸ್ತ್ರ, ಸಂಪ್ರದಾಯಗಳಿಗೆ ಧಕ್ಕೆ ಬಾರದಂತೆ ನಿರ್ವಹಿಸಿದ್ದು ನಿಜ. ಯಾರೇ ಮದುಮಗಳು? ನೀನಾ, ನಿನ್ನ ಮಗಳಾ? ಛೇಡಿಸಿದ್ದಳು ಅತ್ತೆ. ವಿಷಯ ಗೊತ್ತಿದ್ದೂ ಇಂತಾ ಮಾತಾಡಿದವಳ ಕುರಿತು ನಾಗಮ್ಮನಿಗೆ ವಿಪರೀತದ ಸಿಟ್ಟು ಬಂದಿತ್ತು. ತಲೆ ಬಗ್ಗಿಸಿ ಕೂರಬಾರದೆಂದುಕೊಂಡರೂ ಯಾಕೆ ತನ್ನಷ್ಟಕ್ಕೆ ಬಗ್ಗಿಬಿಡುತ್ತಿತ್ತು ತಲೆ? ಕೈಯ ನಡುಕ ತೋರಿಸಿಕೊಳ್ಳಬಾರದೆಂದುಕೊಂಡಿದ್ದರೂ ಯಾಕೆ ನಡುಗುತ್ತಿತ್ತು ಕೈ? ಗಿರ್ಕಂಡು ಕೂತಿದಾಳೆ ಎಂದು ಸೂಕ್ಷ್ಮವಾಗಿ ಗಮನಿಸುವವರಿಗೆ ಗೊತ್ತಾಗುವಷ್ಟು ನಾಗಮ್ಮ ಮೈ ಹಿಡಿ ಮಾಡಿಕೊಂಡಿದ್ದಿದ್ದು ನಿಜ. ಹೇಗೋ, ಎಂತೋ ಎಲ್ಲಾ ಸುಸೂತ್ರವಾಗಿ ಮುಗಿದು ನಾಗಮ್ಮ ಬಿಡುಗಡೆಯ ನಿಟ್ಟುಸಿರಿಟ್ಟಿದ್ದಳು. ಇನ್ನೊಂದು ವಿಷಯದಲ್ಲೂ ನಾಗಮ್ಮನಿಗೆ ಗೀರಿದಂತಾಗಿತ್ತು. ಸಾಕಿದ್ದು, ಬೆಳೆಸಿದ್ದು, ಮಕ್ಕಳ ಅವಶ್ಯಕತೆಗಳನ್ನು ಕಾಲಕ್ಕೆ ತಕ್ಕಂತೆ ಪೂರೈಸಿದ್ದು ತಾಯಿ. ಆದರೆ ಲಗ್ನಪತ್ರಿಕೆ ಬರೆಸಿದ್ದು ತಂದೆಯ ಹೆಸರಿನಲ್ಲಿ. ಅವಳದ್ದೇನಿದ್ದರೂ ನಂತರದ ಸ್ಥಾನ. ಎರಡನೆಯ ಜಾಗ. ಎಲ್ಲಾ ಅವಳಿಗೇ ಬಿಟ್ಟಿದ್ದರೆ ಈ ಮನುಷ್ಯನ ಹೆಸರು ಲಗ್ನಪತ್ರಿಕೆಯಲ್ಲಿ ಸ್ಥಾನ ಪಡೆಯುತ್ತಿತ್ತಾ, ಇಲ್ಲವಾ? ನಾಗಮ್ಮನಿಗೆ ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಕೆಲವೊಂದು ರೂಢಿಗತ ಸಂಪ್ರದಾಯಗಳನ್ನು ಜನ ಎಷ್ಟು ಕುರುಡಾಗಿ ಪಾಲಿಸಿಕೊಂಡು ಬಂದಿದ್ದಾರೆಂದರೆ ಒಂದು ದಿನ ಎತ್ತದ, ಆಡಿಸದ, ಕೊನೆಗೆ ಮುಖ ಕೂಡಾ ನೋಡಿರದ ವಂಶದ ಯಾರೋ ಹಿರೀಕರ ಹೆಸರು ಲಗ್ನಪತ್ರಿಕೆಯಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡು ಬಿಡುತ್ತದೆ. ಅವರು ವಂಶದ ಹಿರಿಯರಾಗಿ ಉಳಿದುಕೊಂಡಿದ್ದಾರೆ ಎನ್ನುವುದೇ ಅವರ ಅರ್ಹತೆ. ಇವರ ಮನೆಯ ಎಲ್ಲಾ ವಿಷಯ ಗೊತ್ತಿರುವ ಸ್ವಂತ ಸೋದರಮಾವ ಲಗ್ನಪತ್ರಿಕೆಯನ್ನು ಯಾವ ಮುಜುಗರವೂ ಇಲ್ಲದೆ ಬರೆದು ಪೂರೈಸಿದ್ದ. ಬೀಗರಾಗುವವರು ಪರಸ್ಪರ ಲಗ್ನಪತ್ರಿಕೆ, ಫಲ ತಾಂಬೂಲ ಬದಲಾಯಿಸಿಕೊಂಡು, ಕನಸಿನಲ್ಲೆಂಬಂತೆ ನಡೆದು ಹೋಗಿತ್ತು ಕಾರ್ಯಕ್ರಮ. ನಾಗಮ್ಮನ ಮಟ್ಟಿಗೆ ಸಮಾಧಾನದ ವಿಷಯವೆಂದರೆ ಮಗಳು ಹಿಗ್ಗಿನಿಂದ ಬಿರಿಯುವಂತಾಗಿದ್ದಾಳೆ ಎನ್ನುವುದೊಂದೇ. ಕೊನೆಗೆ ಎಲ್ಲಾ ಬಯಸುವುದು ಇನ್ನೇನನ್ನು? ತಮ್ಮ ಮಕ್ಕಳು ಸುಖವಾಗಿ, ಸಂತೋಷವಾಗಿ ನೂರ್ಕಾಲ ಬಾಳಲಿ ಎನ್ನುವುದನ್ನಲ್ಲವೇ? ಯಾವ ಕಷ್ಟಕಾರ್ಪಣ್ಯಗಳೂ ಅವರನ್ನು ಸೋಕದಿರಲಿ ಎಂದಲ್ಲವೇ? ತನ್ನ ಅಪ್ಪ, ಅಮ್ಮ ಕೂಡಾ ಹೀಗೆಯೇ ಹಾರೈಸಿರುತ್ತಾರೆ. ಅವರು ಮಾತ್ರ ಯಾಕೆ, ಪ್ರಪಂಚದ ಎಲ್ಲಾ ಹೆತ್ತವರೂ ಮಕ್ಕಳ ಕುರಿತಾಗಿ ಹೀಗೆಯೇ ಹಾರೈಸುತ್ತಾರೆ. ಆದರೆ ಒಪ್ಪಲಿ, ಬಿಡಲಿ, ವಿಧಿ ಅನ್ನುವುದೊಂದು ಇದ್ದೇ ಇದೆಯಲ್ಲ? ಎಲ್ಲರ ಹಣೆಬರಹ ಅದರ ಕೈಯಲ್ಲಿ. ತಾವು ಬರಿಯ ಬೊಂಬೆಗಳು. ಅಥವಾ ಪಗಡೆಯ ಕಾಯಿಗಳು. ಗರ ಹಾಕಿ ಮುನ್ನಡೆಸುವವನು ಮತ್ತ್ಯಾರೋ..

* * *

'ಬೆಳಿಗ್ಗೆ ಎದ್ದು ಹೋದ್ರಾಯ್ತು, ಇರು ಅಪ್ಪಾ..' ಪದ್ಮನಾಭ ಒತ್ತಾಯ ಮಾಡಿದ್ದ. ಕಿವಿಗೊಟ್ಟಿರಲಿಲ್ಲ ರಾಮಚಂದ್ರ. ಬೀಗರಾಗುವವರ ಕಾರುಗಳು ಹೊರಡುತ್ತಿದ್ದಂತೆ ಇವನೂ ಹೊರಟು ನಿಂತಿದ್ದ. ಹೊರಡುವ ಮುನ್ನ ಯಾರಿಗೂ ಹೇಳಿ ಹೋಗಬೇಕಾದ ಅವಶ್ಯಕತೆ ಇಲ್ಲ. ಆ ಥರದ ಸಂಬಂಧ ಯಾವತ್ತೋ ಸತ್ತು ಹೋಗಿದೆ. ಹತ್ತಿರದ ಕೆಲವರು ಇನ್ನೂ ಮನೆಯಲ್ಲಿದ್ದರು. ಯಾರ ಕಡೆಯೂ ನೋಡುವ ಗೋಜಿಗೆ ಹೋಗಲಿಲ್ಲ ರಾಮಚಂದ್ರ. ಇವತ್ತಿನ ಹಾಗೆ ಮದುವೆಯ ದಿನ ಕೂಡಾ ಒಂದು ಪಾತ್ರ ನಿಭಾಯಿಸಿಬಿಟ್ಟರೆ ಅಲ್ಲಿಗೆ ಎಲ್ಲಾ ಕೈದು. ಮಗನ ಮದುವೆಗೆ ಕರೆದರೂ ಆಯ್ತು, ಬಿಟ್ಟರೂ ಆಯ್ತು. ತಾನೂ ಅಷ್ಟೇ. ಬಂದರೂ ಸರಿ, ಬಿಟ್ಟರೂ ಸರಿ. ಹುಡುಗಿ ಅಂದರೆ ಏನೋ ಜವಾಬ್ದಾರಿಯ ಭಾವನೆ. ಏಷ್ಟಾದರೂ ತಾನು ಎತ್ತಿ ಆಡಿಸಿದ ಮಗು. ಪದ್ಮನಾಭನನ್ನು ಮನಃತೃಪ್ತಿಯಾಗಿ ಎತ್ತಲೂ ಇಲ್ಲ, ಆಡಿಸಲೂ ಇಲ್ಲ ಅಂದುಕೊಳ್ಳುವಾಗ ಗಂಟಲು ಬಿಗಿದಂತಾಯ್ತು. ಗಂಡು.., ಗಂಡು.. ಎಂದು ಹಲವರಿಯುತ್ತಿದ್ದಳು ತನ್ನಮ್ಮ. ಅವಳು ಅಪೇಕ್ಷಿಸಿದಂತೆ ಗಂಡು ಮಗುವೇ ಹುಟ್ಟಿ, ತಮಗೆ ದಕ್ಕಿದ್ದೆಂತದು? ಏನೂ ಇಲ್ಲ. ಮೊಮ್ಮಗನನ್ನು ಎತ್ತಾಡಿಸುವ ಸುಖ ಅಮ್ಮನಿಗೆ ಸಿಗಲೇ ಇಲ್ಲ..

ಕಾರುಗಳು ಹೊರಟು ಹೋದ ನಂತರ ಉಣುಗೋಲು ಹಾಕಿಕೊಂಡು ಬರಲು ಅಂಗಳದ ತುದಿಗೆ ಹೋಗಿದ್ದ ಪದ್ಮನಾಭ ಕೈಚೀಲ ಹಿಡಿದು ಹೊರಟಿದ್ದ ಅಪ್ಪನನ್ನು ಕಂಡು ಅವಾಕ್ಕಾದ.

'ಇದೆಂತಕ್ಕೆ ಇಷ್ಟು ಬೇಗ ಹೊರಟಿದ್ದಿ? ಬೆಳಿಗ್ಗೆ ಹೋದ್ರಾಯ್ತು, ಇರು..'

'ದೇವ್ರೇ ಗತಿ. ಕೊಟ್ಟಿಗೇಲಿ ಜಾನುವಾರು ಇದಾವೆ. ಮುಂಚೇಕಡೇಲಿ ಅಡಿಕೆ ಮೂಟೆ. ನೀನೇ ನೋಡಿದೀಯಲ್ಲ?'

'ಒಂದು ರಾತ್ರೀಲಿ ಏನಾಗಲ್ಲ..'

'ಏನಾಗುತ್ತೋ, ಬಿಡುತ್ತೋ, ಒಪ್ಪೊತ್ತಿಗೆ ಒಂದು ವ್ಯವಸ್ಥೆ ಮಾಡಿ ಬಂದಿದೀನಿ. ಎಷ್ಟೊತ್ತಾದ್ರೂ ಸೈ, ಮನೆ ಸೇರ್ಕಂಬೇಕು ನಾನು..'

'ಹೇಳ್ಬಂದ್ಯಾ ಅಮ್ಮಂಗೆ, ಅಕ್ಕಂಗೆ?' ಬಾಯಿ ಬಿಟ್ಟು ಕೇಳದಿದ್ದರೂ ಮುಖಭಾವದಿಂದಲೇ ಹುಡುಗ ಇಂತಾದ್ದೇನೋ ಮಾತುಗಳನ್ನು ನುಂಗಿಕೊಂಡ ಅನಿಸಿತು ರಾಮಚಂದ್ರನಿಗೆ. ಅವನು ಹೆಚ್ಚು ಕೆದಕಲು ಹೋಗಲಿಲ್ಲ. 'ಆಯ್ತು, ಇನ್ನು ಮದುವೆ ಮನೇಲಿ ಸಿಗಾಣ..' ಎನ್ನುತ್ತಾ ಹೆಜ್ಜೆ ಮುಂದಿಟ್ಟ.

'ಹಂಗೆ ನೀನು ಹೋಗ್ಲೇಬೇಕೂಂತಿದ್ರೆ ಕಾರಲ್ಲಿ ಅಷ್ಟು ದೂರ ಹೋಗ್ಬೋದಿತ್ತು. ನಡೀಬೇಕಲ್ಲ ಒಂದೂವರೆ ಮೈಲಿ?'

'ಕಾಲು ಗಟ್ಟಿ ಉಂಟು ಮಾರಾಯಾ. ನಮ್ಮೂರಿನವರೆಗೆ ಬೇಕಾರೂ ನಡ್ಕಂಡೇ ಹೋಗ್ತೀನಿ. ನಿಂಗ್ಯಾಕೆ ಚಿಂತೆ?' ಮಗನಿಂದ ಬೀಳ್ಕೊಂಡು ರಾಮಚಂದ್ರ ಬೀಸು ಹೆಜ್ಜೆ ಹಾಕುತ್ತಾ ಒಂದು ಮೈಲಿ ಹೋಗಿರಬಹುದು, ಹಿಂದಿನಿಂದ ಓಡೋಡಿಕೊಂಡು ಬಂದ ಪದ್ಮನಾಭ. ಯಾರೋ ಓಡಿ ಬರುವ ಸದ್ದಿಗೆ ತಿರುಗಿ ನೋಡಿದ ರಾಮಚಂದ್ರನಿಗೆ ಬುಸುಬುಸು ಏದುಸಿರು ಬಿಡುತ್ತಾ ಬರುತ್ತಿರುವ ಮಗನನ್ನು ಕಂಡು ಅಚ್ಚರಿ.

'ಯಾಕೋ? ಬಸ್ಸು ಹತ್ತಾನಾ ಇಲ್ಲಾ ವಾಪಸು ಬರ್ತಾನಾ ಅಂತ ಪತ್ತೇದಾರಿಕೆ ಮಾಡೋಕೆ ಬಂದ್ಯಾ?' ತಮಾಷಿ ಮಾತಾಡಿದ ರಾಮಚಂದ್ರ. ಪದ್ಮನಾಭನಿಗೆ ತಕ್ಷಣಕ್ಕೆ ಮಾತಾಡಲಾಗದಷ್ಟು ಮೇಲುಸಿರು. ಸ್ವಲ್ಪ ತಡಿ.. ಅನ್ನುವಂತೆ ಅಂಗೈ ಆಡಿಸಿ ಸೈಗೆ ಮಾಡಿದವನು ಕೈಲಿದ್ದ ದೊಡ್ಡ ಪ್ಲಾಸ್ಟಿಕ್ ಚೀಲವನ್ನು ಮುಂದೆ ಮಾಡಿದ.

'ಎಂತದೋ ಇದು?'

'ನಂಗೊತ್ತಿಲ್ಲ. ಅಮ್ಮ ಕೊಟ್ಟಾ ಅಂದ್ಲು'

ಬಿರುಬಿಸಿಲಲ್ಲಿ ತಂಗಾಳಿಯ ಸೆಳಕೊಂದು ಮೈದಡವಿದ ಅನುಭವವಾಯ್ತೇ? ಹೇಗೆ ನಂಬಬೇಕು ಇವನ ಮಾತನ್ನು?

'ಎಂತದೂಂತ ಮೊದ್ಲು ಹೇಳು..'

'ನಂಗೊತ್ತಿಲ್ಲ. ಮನೆಗೆ ತಗೊಂಡ್ಹೋಗಿ ನೋಡು..'

ಅದರಲ್ಲಿ ಏನಿರುತ್ತದೆಯೆಂದು ಊಹಿಸಲಾಗದಷ್ಟು ಪೆದ್ದ ಅಲ್ಲ ರಾಮಚಂದ್ರ. ಇವತ್ತಿನ ವಿಶೇಷದ ತಿಂಡಿಯನ್ನು ಕಟ್ಟಿ ತಂದಿದ್ದಾನೆ ಹುಡುಗ. ಅಥವಾ ಅವನು ಹೇಳಿದ ಹಾಗೆ ಅವನ ಅಮ್ಮ ಕಟ್ಟಿಕೊಟ್ಟು, ಅದರಲ್ಲಿ ವಿಶೇಷಾರ್ಥ ಕಲ್ಪಿಸುವುದಕ್ಕೆ ಏನಿದೆ? ಎಲ್ಲರಿಗೂ ಕೊಟ್ಟ ಹಾಗೆ ತನಗೂ ಕೊಟ್ಟಿರಬಹುದು. ತಾನು ಅವರ ಕರೆಗೆ ಓಗೊಟ್ಟು ಬಂದು ಎಲ್ಲವನ್ನೂ ಸುಸೂತ್ರವಾಗಿ ನಡೆಸಿಕೊಟ್ಟ ಕೃತಜ್ಞತೆಗಾಗಿಯೂ ಇರಬಹುದು.

'ಬೇಡ.. ' ಎಂದ ರಾಮಚಂದ್ರ.

'ಯಾಕೆ?' ಮುಗ್ಧವಾಗಿ ಕೇಳಿದ ಪದ್ಮನಾಭ.

'ಇರೋನು ನಾನೊಬ್ಬ. ಇದನ್ನೆಲ್ಲಾ ಹೊತ್ಕಂಡ್ಹೋಗಿ ನಾನೇನ್ಮಾಡ್ಲಿ?'

'ಅದೆಲ್ಲಾ ನಂಗೊತ್ತಿಲ್ಲ. ತಗಾ ಅಂದ್ರೆ ತಗಂಬೇಕು..'

ಪ್ರೀತಿಪೂರ್ವಕ ಒತ್ತಾಯ. ಇವನೇ ಮುತುವರ್ಜಿ ವಹಿಸಿ ಎಲ್ಲವನ್ನೂ ಕಟ್ಟಿಕೊಂಡು ತಂದಿರಬಹುದೇ? ಆರ್ದ್ರವಾಯ್ತು ಮನಸ್ಸು. ರಾಮಚಂದ್ರ ಅವನ ಕೈಲಿದ್ದ ಚೀಲ ಇಸಿದುಕೊಂಡ.

'ಇದನ್ನ ಕೊಡೋಕೆ ಇಷ್ಟು ದೂರ ಓಡೋಡ್ಕಂಡು ಬಂದ್ಯಲ್ಲ, ಬೇರೆ ಕಸುಬಿಲ್ವಾ ನಿಂಗೆ? ನಡಿ, ಮನೆಗೆ ಹೋಗು..'

ಹೋಗಲಿಲ್ಲ ಪದ್ಮನಾಭ. ಅದೂ ಇದೂ ಹರಟುತ್ತಾ ಬಸ್ಸು ನಿಲ್ಲುವಲ್ಲಿಯವರೆಗೆ ಬಂದವನು ಬಸ್ಸು ಬರುವವರೆಗೆ ಅಲ್ಲೇ ಕಾದು ನಿಂತು, ಬಸ್ಸು ಹೊರಡುತ್ತಿದ್ದಂತೆ ಕೈಯಾಡಿಸಿ ಬೀಳ್ಕೊಂಡು, ರಾಮಚಂದ್ರನ ಕಣ್ಣಾಲಿಗಳು ತೇವಗೊಂಡವು.

**(ಸಶೇಷ)**